ಓ.ಎಸ್. ನಂ. 59/2023 ಡಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 15.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಬಿ.ಎಸ್ ವಕೀಲರಿಂದಃ**

ನಾನು ವಿದ್ಯಾಭ್ಯಾಸವನ್ನೆ ಮಾಡಿರುವುದಿಲ್ಲ. ನಾನು ಕೋಟೆಹುಂಡಿ ಗ್ರಾಮದಲ್ಲಿ ಎರಡುವರೆ ವರ್ಷ ಕಾಲ ವಾಸವಾಗಿದ್ದು ತರಕಾರ ವ್ಯಾಪಾರವನ್ನು ಮಾಡುತ್ತಿದ್ದೆ. ವಾದಿಯು ಮೈಸೂರು ತಾಲ್ಲೂಕಿನ ಕೋಟೆಹುಂಡಿ ಗ್ರಾಮದಲ್ಲಿ ವಾಸವಾಗಿದ್ದರು. ವಾದಿಯು ನಾನು ಕೋಟೆಹುಂಡಿ ಗ್ರಾಮದಲ್ಲಿ ವಾಸಿಸಲು ಪ್ರಾರಂಭಿಸಿದಾಗ ಪರಿಚಯವಾಗಿರುತ್ತಾರೆ. ನನ್ನ ಮೂಲ ಊರು ಅಣ್ಣಯ್ಯಪ್ಪನ ಶೆಡ್ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು ಆಗಿರುತ್ತದೆ. ಅಲ್ಲಿ ನನಗೆ ವಾಸದ ಮನೆ ಮತ್ತು ಬೇರೆ ಆಸ್ತಿ ಇರುತ್ತದೆ. ದಾವಆಸ್ತಿಯು ಪಡುಕೋಟೆ ಗ್ರಾಮದಲ್ಲಿರುತ್ತದೆ. ದಾವ 1 ನೇ ಐಟಂ ಆಸ್ತಿಯು ನನ್ನ ಹೆಸರಿನಲ್ಲಿರುತ್ತದೆ. ದಾವ 2 ನೇ ಐಟಂ ಆಸ್ತಿಯು ನನ್ನ ಹೆಂಡತಿಯ ಹೆಸರಿನಲ್ಲಿರುತ್ತದೆ. ದಾವಆಸ್ತಿಗಳ ದಾಖಲೆಗಳು ನನ್ನ ಬಳಿ ಇರುತ್ತದೆ. ನಾನು ನೀಡುವ ದಾಖಲೆಯ ಆಧಾರದ ಮೇಲೆ ಯಾವುದೇ ದಾಖಲಾತಿಯನ್ನು ತಯಾರಿಸಿದರೆ ಅದರಲ್ಲಿ ಆಸ್ತಿ ನಂಬರ್ ಮತ್ತು ಇತರ ವಿವರವನ್ನು ನಮೂದಿಸುತ್ತಾರೆ ಎಂದರೆ ಸಾಕ್ಷಿದಾರರು ಮಗಳ ಮದುವೆಗೆ 5 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದು ನನಗೆ ಓದಲು ಬರೆಯಲು ಬಾರದ ಕಾರಣ ವಾದಿಯು ಆಧಾರಪತ್ರದ ಬದಲು ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎನ್ನುವರು. ನಿಪಿ1 ಕ್ಕೆ ಸಹಿ ಮಾಡಿರುವ ಸೋಮು ಮತ್ತು ಸೋಮಣ್ಣ ಎಂಬುವವರು ಹೆಚ್.ಡಿ.ಕೋಟೆ ತಾಲ್ಲೂಕಿನವರು ಎಂದರೆ ಸಾಕ್ಷಿದಾರರು ಅವರು ಯಾರೆಂದು ನನಗೆ ಗೊತ್ತಿರುವುದಿಲ್ಲ ಎನ್ನುವರು. ನಾನು 5 ಲಕ್ಷ ಹಣವನ್ನು ವಾದಿಯಿಂದ ಪಡೆದುಕೊಂಡಿರುತ್ತೇನೆ. ನಿಪಿ1 ದಾಖಲೆಯನ್ನು ಹೆಚ್.ಡಿ.ಕೋಟೆಯ ನೊಂದಣಿ ಕಛೇರಿಯಲ್ಲಿ ಬರೆಯಲಾಗಿರುತ್ತದೆ. ನಿಪಿ1 ದಾಖಲೆಯಲ್ಲಿ ಆಸ್ತಿಯ ವಿವರವನ್ನು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿದಾರರು ಸದರಿ ದಾಖಲೆಯನ್ನು ನನಗೆ ಓದಿ ಹೇಳಿರುವುದಿಲ್ಲ, ಹಣದ ಭದ್ರತೆಗಾಗಿ ದಾಖಲೆಯನ್ನು ಮಾಡಿರುವುದಾಗಿ ಹೇಳಿರುತ್ತಾರೆ ಎನ್ನುವರು. ನನಗೆ 1 ರಿಂದ 100 ರವರೆಗಿನ ಅಂಕಿಗಳು ಗೊತ್ತಿರುತ್ತದೆ. ನಿಪಿ1 ರಲ್ಲಿ ನಾನು ಸಹಿ ಮಾಡಿರುತ್ತೇನೆ. ನಿಪಿ1 ಕ್ಕೆ ನಾನು ಸಹಿ ಮಾಡಿದಾಗ ಅದರಲ್ಲಿ ಬರವಣಿಗೆಯಾಗಿತ್ತು. ನನಗೆ ಖಾಲಿ ಪತ್ರಕ್ಕೆ ಸಹಿ ಮಾಡುವ ಅಭ್ಯಾಸ ಇರುವುದಿಲ್ಲ. ಸಾಕ್ಷಿದಾರರು ಮುಂದುವರಿದು ವಾದಿಯು ಹಣದ ಭದ್ರತೆಗೆ ಸಹಿ ಮಾಡಲು ಹೇಳಿದಾಗ ಖಾಲಿ ಪತ್ರಕ್ಕೂ ಸಹ ಸಹಿ ಮಾಡಿರುತ್ತೇನೆ ಎನ್ನುವರು. ನಾವು ದಾವಆಸ್ತಿಗಳು ವಾದಿಗೆ 7 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ನಿಪಿ1 ರಂತೆ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಅದೇ ದಿನ ವಾದಿಯಿಂದ 5 ಲಕ್ಷ ಹಣವನ್ನು ನಗದಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 3 ವರ್ಷಗಳ ಒಳಗೆ ದಾವಆಸ್ತಿಗಳ ಕ್ರಯಪತ್ರವನ್ನು ವಾದಿಗೆ ಬರೆದುಕೊಡುವುದಾಗಿ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಉಳಿಕೆ 2 ಲಕ್ಷ ಹಣವನ್ನು ಕ್ರಯಪತ್ರ ಬರೆದುಕೊಡುವ ಸಮಯದಲ್ಲಿ ಪಡೆದುಕೊಂಡು ಕ್ರಯಪತ್ರ ಬರೆದುಕೊಡುವುದಾಗಿ ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ಕ್ರಯಪತ್ರ ಬರೆದುಕೊಡದಿದ್ದಾಗ ದಿನಾಂಕ

3.10.2022 ರಂದು ನಿಪಿ2 ರಂತೆ ವಾದಿಯು ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಸದರಿ ನೋಟಿಸ್ ಬಂದಾಗ ಕರಾರುಪತ್ರವನ್ನು ಮೋಸದಿಂದ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಾಗಿ ಹಣದ ಸಮೇತ ವಾದಿಯನ್ನು ಭೇಟಿಯಾಗಿ ಸಾಲದ ಹಣವನ್ನು ವಾಪಸ್ ಪಡೆದುಕೊಳ್ಳಲು ಕೇಳಿದಾಗ ಅವರು ಹಣವನ್ನು ವಾಪಸ್ ಪಡೆದುಕೊಳ್ಳದಿದ್ದರಿಂದ ನಾವೇ ವಾದಿಗೆ ನೋಟಿಸನ್ನು ನೀಡಿರುತ್ತೇವೆ ಎನ್ನುವರು. ಕರಾರುಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿದಾರರು ನೋಟಿಸ್ ಬಂದಾಗ ಗೊತ್ತಾಗಿರುತ್ತದೆ ಎನ್ನುವರು.  ಆಧಾರಪತ್ರ ಮಾಡಿಸಿಕೊಳ್ಳಲು ಹೋಗಿ ಮೋಸದಿಂದ ಕರಾರುಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ನಾನು ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ.

ವಾದಿಯು ನನಗೆ ನಿಪಿ9 ರಂತೆ ಇನ್ನೊಂದು ನೋಟಿಸನ್ನು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿದಾರರು ಅದು ನನಗೆ ತಲುಪಿರುವುದಿಲ್ಲ ಎನ್ನುವರು.  ನಂತರ ಸಾಕ್ಷಿದಾರರು ಮುಂದುವರಿದು ಎರಡು ನೋಟಿಸುಗಳು ನಮಗೆ ತಲುಪಿರುತ್ತದೆ, ನಾನು ನೋಟಿಸ್ ನೀಡಿದ ನಂತರ ಅವರು ನಮಗೆ ನೋಟಿಸ್ ನೀಡಿರುತ್ತಾರೆ ಎನ್ನುವರು. ವಾದಿಯು ನೋಟಿಸ್ ನೀಡಿದ ನಂತರ ನಾನು ವಾದಿಗೆ ನೋಟಿಸ್ ಕಳುಹಿಸಿರುತ್ತೇನೆ ಎಂದರೆ ಸಾಕ್ಷಿದಾರರು ವಾದಿಯು ನೋಟಿಸ್ ನೀಡಿದ ನಂತರ ವಿಚಾರ ಗೊತ್ತಾಗಿ ತಕ್ಷಣ ಉತ್ತರ ಕಳುಹಿಸಿರುತ್ತೇನೆ ಎನ್ನುವರು. ನಿಡಿ3 ರಂತೆ ಉತ್ತರ ನೀಡಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.  ಲಿಖಿತ ಹೇಳಿಕೆ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ.  ನಿಡಿ3 ಉತ್ತರ ಮತ್ತು ತಕರಾರಿನಲ್ಲಿ ಹೇಳಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ.  ವಾದಿಯು ತಿಂಗಳಿಗೆ ಶೇ.5 ರಂತೆ ಬಡ್ಡಿಗೆ ನನಗೆ ಸಾಲದ ಹಣವನ್ನು ನೀಡಿರುತ್ತಾರೆ.  ತಿಂಗಳಿಗೆ 25 ಸಾವಿರ ಬಡ್ಡಿ ಕಟ್ಟುತ್ತಿದ್ದೆವು.  ಪ್ರತಿ ತಿಂಗಳು ಯಾವಾಗ ಬಡ್ಡಿ ನೀಡುತ್ತಿದ್ದೀರಿ ಎಂದರೆ ಸಾಕ್ಷಿದಾರರು 5 ಅಥವಾ 10 ನೇ ತಾರೀಖಿಗೆ ನೀಡುತ್ತಿದ್ದೆವು, ದಿನಾಂಕ ನೆನಪಿರುವುದಿಲ್ಲ.  ಬಡ್ಡಿ ನೀಡಿದ ಬಗ್ಗೆ ರಶೀದಿಯನ್ನು ಬರೆಸಿಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ಬರೆದುಕೊಡಲು ಕೇಳಿದ್ದು ಅವರು ಬರೆದುಕೊಡದಿದ್ದರಿಂದ ನನ್ನ ಅಳಿಯನ ಸ್ನೇಹಿತನ ಪೋನ್ ಪೇ ಮೂಲಕ ವಾದಿಗೆ ಬಡ್ಡಿ ಹಣವನ್ನು ನೀಡಿರುತ್ತೇನೆ ಎನ್ನುವರು.  ನಾನು ದಿನಸಿ ಅಂಗಡಿ ಹಾಗೂ ತರಕಾರಿ ವ್ಯಾಪಾರ ಮಾಡುತ್ತೇನೆ.  ನನಗೆ ಪ್ರತಿದಿನ ಒಂದರಿಂದ ಒಂದುವರೆ ಸಾವಿರ ಆದಾಯ ಬರುತ್ತಿತ್ತು.  ನನ್ನನ್ನು ಅವಲಂಬಿಸಿ 2019 ರಲ್ಲಿ ಐದು ಜನ ಇದ್ದರು. ನನ್ನ ತಾಯಿ, ಹೆಂಡತಿ ಮತ್ತು ಚಿಕ್ಕ ಮಗಳು ಕೆಲಸಕ್ಕೆ ಹೋಗುತ್ತಿದ್ದರು.  ನನ್ನ ತಾಯಿ ಮತ್ತು ಹೆಂಡತಿ ಮನೆಕೆಲಸಕ್ಕೆ ಹೋಗುತ್ತಿದ್ದರಿಂದ ಸಂಬಳ ಪಡೆದಿರುವ ಬಗ್ಗೆ  ದಾಖಲೆ ಇರುವುದಿಲ್ಲ.  ನನ್ನ ಮಗಳು ಶ್ರೀರಾಂಪುರದ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದಳು.  ನಾನು ದಿನಸಿ ಅಂಗಡಿ ಮತ್ತು ತರಕಾರಿ ಅಂಗಡಿ ಇಟ್ಟುಕೊಂಡಿದ್ದ ಬಗ್ಗೆ ಪರವಾನಗಿಯನ್ನು ಹಾಜರುಪಡಿಸಿರುವುದಿಲ್ಲ.  ನನಗೆ ಯಾವುದೇ ಆದಾಯ ಇರಲಿಲ್ಲ, ನನ್ನ ಮಗಳ ವಿದ್ಯಾಭ್ಯಾಸ ಮತ್ತು ಮದುವೆಗೆ ಹಣದ ಅವಶ್ಯಕತೆ ಇದುದ್ದರಿಂದ ದಾವಆಸ್ತಿಗಳನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಕರಾರುಪತ್ರವನ್ನು ಬರೆದುಕೊಟ್ಟು 5 ಲಕ್ಷ ಮುಂಗಡವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈಗ ದಾವಆಸ್ತಿಗಳ ಮೌಲ್ಯ ಜಾಸ್ತಿಯಾಗಿರುವುದರಿಂದ ಅದನ್ನು ಉಳಿಸಿಕೊಳ್ಳಲು ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೇ.5 ಬಡ್ಡಿ ಕೊಡಲು ಒಪ್ಪಿ ಪ್ರತಿ

ತಿಂಗಳು 25 ಸಾವಿರ ಬಡ್ಡಿಯನ್ನು ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ1 ಬರೆದುಕೊಟ್ಟ 3 ವರ್ಷದ ಒಳಗೆ ವಾದಿಯು ನನಗೆ ನೋಟಿಸನ್ನು ಕಳುಹಿಸಿದ್ದು, ನಂತರ ನಾನು 5 ಲಕ್ಷವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ, ಬಡ್ಡಿ ಸೇರಿ ಹಣ ವಾಪಸ್ ನೀಡುವುದಾಗಿ ಸುಳ್ಳು ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರತ್ಯುತ್ತರದಲ್ಲಿ ಮತ್ತು ತಕರಾರಿನಲ್ಲಿ ಶೇ.5 ರಂತೆ ಬಡ್ಡಿ ಪಾವತಿಸುತ್ತಿದ್ದೇನೆ ಎಂದು ಬರೆಸಿರುವುದಿಲ್ಲ. ಶೇ.5 ರಂತೆ ಬಡ್ಡಿ ಪಾವತಿಸುತ್ತಿದ್ದೆ ಎಂದು ಇದೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ಚೆಕ್ ನೀಡಿದಾಗ ಅದರ ಕೌಂಟರ್ ಫೈಲ್ ನನ್ನ ಬಳಿ ಇರುತ್ತದೆ ಎಂದರೆ ಸರಿ. ಸದರಿ ಕೌಂಟರ್ ಫೈಲಿನಲ್ಲಿ ಚೆಕ್ ಪಡೆದವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ವಾದಿಯ ಗಂಡ ಗಾರೆ ಕೆಲಸ ಮಾಡಿ ಚೀಟಿ ವ್ಯವಹಾರ, ಫೈನಾನ್ಸ ವ್ಯವಹಾರ ಮಾಡುತ್ತಾರೆ. ವಾದಿಯ ಗಂಡ ಕಟ್ಟಡ ಕಟ್ಟುವ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ ಎನ್ನುವರು.

ಜವರೇಗೌಡರವರು ಯಾವುದೇ ಮನೆ ಕಟ್ಟಿರುವುದಿಲ್ಲ, ಅವರು ನನ್ನ ಜೊತೆ ಕೋಟೆಹುಂಡಿಯಲ್ಲಿ ವಾಸವಾಗಿದ್ದು, ಈಗ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಸದರಿ ಜವರೇಗೌಡರಿಗೂ ವಾದಿಯ ಗಂಡನಿಗೂ ನಾನು ವಾದಿಯಿಂದ ಹಣ ಪಡೆದುಕೊಂಡಾಗ ಪರಿಚಯವಾಗಿರುತ್ತಾರೆ. ಸದರಿ ಜವರೇಗೌಡರಿಗೂ ವಾದಿಯ ಗಂಡನಿಗೂ ಅವರ ವ್ಯವಹಾರದ ಬಾಬ್ತು 30 ಸಾವಿರ ಹಣವನ್ನು 2021 ರಲ್ಲಿ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನಾನು ವಾದಿಗೆ ನೀಡುತ್ತಿದ್ದ ಬಡ್ಡಿ ಹಣದ ಬಾಬ್ತು ರಶೀದಿ ಬರೆದುಕೊಡಲು ನಿರಾಕರಿಸಿದಾಗ ಸದರಿ ಜವರೇಗೌಡರ ಮೂಲಕ ವಾದಿಯ ಗಂಡನಿಗೆ ಹಣವನ್ನು ಫೋನ್‌ಪೇ ಮಾಡಿಸಿರುತ್ತೇನೆ ಎನ್ನುವರು. ಯಾವ ಕಾರಣಕ್ಕೆ ಹಣ ಕಳುಹಿಸುತ್ತಿದ್ದೇನೆ ಎಂದು ಕಾರಣ ನಮೂದಿಸಿ ಜವರೇಗೌಡರು ಫೋನ್‌ಪೇ ಮಾಡಿರುವುದಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುವ ರಾಮಣ್ಣರವರು 2021 ರಲ್ಲಿ ಶ್ರೀರಾಂಪುರದಲ್ಲಿ ವಾಸವಾಗಿದ್ದರು. ಸದರಿ ರಾಮಣ್ಣರವರು ವಾದಿಯ ಗಂಡನಿಗೆ ಫೋನ್‌ಪೇ ಮಾಡಿದಾಗ ಕಾರಣ ನಮೂದಿಸಿರುತ್ತಾರಾ ಎಂದರೆ ಸಾಕ್ಷಿದಾರರು ನನಗೆ ಅಷ್ಟು ತಿಳುವಳಿಕೆ ಇರುವುದಿಲ್ಲ ಎನ್ನುವರು. ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುವ ಜವರೇಗೌಡ ಮತ್ತು ರಾಮಣ್ಣರವರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿಸುತ್ತೇನೆ. ದಾವಆಸ್ತಿಯ ಮೌಲ್ಯ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಮತ್ತು 2 ನೇ ಪ್ರತಿವಾದಿ ದಾವಆಸ್ತಿಗಳನ್ನು ವಾದಿಗೆ 7 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ನಿಪಿ1 ನ್ನು ಬರೆದುಕೊಟ್ಟು ಮುಂಗಡವಾಗಿ 5 ಲಕ್ಷವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಕಂಡು ಬರುವ ಭಾವಚಿತ್ರ ಮತ್ತು ಸಹಿ ನನ್ನ ಹಾಗೂ ನನ್ನ ಹೆಂಡತಿಯ ಭಾವಚಿತ್ರ ಮತ್ತು ಸಹಿ ಆಗಿರುತ್ತದೆ. ಸಾಕ್ಷಿದಾರರು ಅವುಗಳನ್ನು ನೋಡಿ ಒಪ್ಪಿದ್ದರಿಂದ ಸದರಿ ಭಾಗವನ್ನು ನಿಪಿ1 ಇ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮುಂದುವರಿದು ನನ್ನ ಮಗಳ ಸಹಿಯನ್ನು ಸದರಿ ದಾಖಲೆಗೆ ಫೋರ್ಜರಿ ಮಾಡಿರುತ್ತಾರೆ ಎನ್ನುವರು. ನಿಪಿ1 ನ್ನು ನಾವು ಓದಿ ತಿಳಿದುಕೊಂಡು ಒಪ್ಪಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ದಾವಆಸ್ತಿಯ ಮೌಲ್ಯ ಜಾಸ್ತಿಯಾಗಿರುವುದರಿಂದ ವಾದಿಗೆ ಕರಾರುಪತ್ರ ಬರೆದುಕೊಟ್ಟಿರುವುದಿಲ್ಲ, 5 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು ಅದಕ್ಕೆ ಬಡ್ಡಿ ಸೇರಿಸಿ ನೀಡುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ

10.1.2023 ರಂದು ನೋಂದಣಿ ಕಛೇರಿಗೆ ಬಾಕಿ ಹಣದ ಸಮೇತ ಬಂದಿರುವ ಬಗ್ಗೆ ದಾಖಲಾತಿ ಇರುತ್ತದಾ ಎಂದರೆ ಸಾಕ್ಷಿದಾರರು ನೋಂದಣಿ ಕಛೇರಿಗೆ ಹೋಗಿರುವುದಿಲ್ಲ, ಆದರೆ ವಾದಿಯ ಬಳಿ ಏಕೆ ಮೋಸ ಮಾಡಿರುತ್ತೀರಿ ಬಾಕಿ ಹಣ ಪಡೆದುಕೊಂಡು ಸದರಿ ದಾಖಲೆಯನ್ನು ರದ್ದುಪಡಿಸಲು ಕೇಳಿರುತ್ತೇವೆ ಎನ್ನುವರು. ನಂತರ ಸಾಕ್ಷಿದಾರರು ಮುಂದುವರಿದು ಸದರಿ ದಿನ ನಾವು ಮತ್ತು ವಾದಿಯು ನೋಂದಣಿ ಕಛೇರಿಗೆ ಬಂದಿದ್ದು ಮೋಸ ಮಾಡಿಸಿಕೊಂಡು ಬರೆದುಕೊಂಡಿರುವ ದಾಖಲೆಯನ್ನು ರದ್ದುಪಡಿಸಿಕೊಡಿ ಎಂದು ಕೇಳಿರುತ್ತೇವೆ ಎನ್ನುವರು. ಸದರಿ ಸಮಯದಲ್ಲಿ ವಾದಿಯು ಹೇಳಿದಾಗ ಕರಾರುಪತ್ರ ಮಾಡಿಸಿಕೊಂಡಿರುವ ಬಗ್ಗೆ ಗೊತ್ತಾಗಿರುತ್ತದೆ. ನನ್ನ ಆಸ್ತಿಯ ಇ.ಸಿ ಪಡೆದುಕೊಂಡರೆ ಅದರಲ್ಲಿ ಯಾವ ದಾಖಲೆ ನೋಂದಣಿಯಾಗಿರುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿದಾರರು ನಾನು ಇ.ಸಿ ಪಡೆದುಕೊಂಡಿರುವುದಿಲ್ಲ ಎನ್ನುವರು. ನೊಂದಣಿ ಕಛೇರಿಗೆ ಬಂದಿದ್ದೇವೆ ಎಂದು ಹೇಳುವ ದಿನ ಠಾಣೆಗೆ ಹೋಗಿ ದೂರು ನೀಡಿರುತ್ತಿರಾ ಎಂದರೆ ಸಾಕ್ಷಿದಾರರು ದೂರು ನೀಡಿರುವುದಿಲ್ಲ, ಅದೇ ದಿನ ವಕೀಲರ ಬಳಿ ಹೋಗಿ ಮೋಸ ಮಾಡಿರುವ ಬಗ್ಗೆ ಪ್ರತ್ಯುತ್ತರ ನೀಡಿರುತ್ತೇನೆ ಎನ್ನುವರು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.